**CC 418/2016**
**PW.1**

## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 418/2016**

**ಪಿ ಡಬ್ಲೂ - 1**

**ಸಿ ಡಬ್ಲೂ - 1**

**ದಿಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಜಿ.ವಿ. ರಾಮಕೃಷ್ಣಪ್ಪ**
**ತಂದೆಯ ಹೆಸರು ಃ ವೆಂಕಟಶ್ಯಾಮಪ್ಪ**
**ವಯಸ್ಸು ಃ 77 ವರ್ಷ**
**ಉದ್ಯೋಗ ಃ ನಿವೃತ್ತ ಜಾಯಿಂಟ್ ಡೈರೆಕ್ಟರ್**
**ವಿಳಾಸ ಃ ಬೆಂಗಳೂರು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತರು ನಮ್ಮ ಸಂಬಂಧಿಕರು. ಚಾಸಾ-2 ರವರು ನನ್ನ ಸಹೋದರ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿತರು ಮತ್ತು ನನ್ನ ನಡುವೆ ಜಮೀನಿನ ವಿಚಾರಕ್ಕಾಗಿ ಮಾತಿನ ಚಕಮಕಿಯಾಗಿದ್ದು ಆಗ ನಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಮತ್ತು 2 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1 ಮತ್ತು 2 ರಲ್ಲಿನ ವಿಚಾರ ಗೊತ್ತಿಲ್ಲ. ಆರೋಪಿತರು ನನ್ನ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿಲ್ಲ. ಆರೋಪಿತರು ಅವಾಚ್ಯಶಬ್ಧಗಳಿಂದ ಬೈದಿಲ್ಲ ಹಾಗೂ ಕೈಗಳಿಂದ ಹೊಡೆದು ತಳ್ಳಾಡಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ ಸ ಅ ರವರಿಂದ**

ದಿಃ 05.10.2014 ರಂದು ಮಧ್ಯಾಹ್ನ 12-00 ಗಂಟೆ ಸಮಯದಲ್ಲಿ ನಾನು ಮತ್ತು

ಚಾಸಾ-2 ರವರು ಗುಮ್ಮನಹಳ್ಳಿ ಗ್ರಾಮದ ಸರ್ವೆ ನಂ. 7/1 ಬಿಗೆ ಸೇರಿದ 18 ಗುಂಟೆ ಜಮೀನಿನಲ್ಲಿ ನಾನು ಮತ್ತು ಚಾಸಾ-2 ರವರು ಟ್ರ್ಯಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತಿದ್ದಾಗ 1 ರಿಂದ 4 ನೇ ಆರೋಪಿತರು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿತರು ಜಮೀನು ತಮಗೆ ಸೇರಿದ್ದು ಎಂದು, ಉಳುಮೆ ಮಾಡಿಸುತ್ತಿರುವವನು ಯಾವನೋ ಎಂದು ಅವಾಚ್ಯಶಬ್ಧಗಳಿಂದ ಬೈದು ನನಗೂ ಹಾಗೂ ಚಾಸಾ-2 ರವರಿಗೂ ಕೈಗಳಿಂದ ಹೊಡೆದು ತಳ್ಳಾಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಿಃ 05.10.2014 ರಂದು ಪೋಲೀಸ್ ಠಾಣೆಗೆ ಹೋಗಿ ನಿಪಿ-1 ರಂತೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿಃ 06.10.2014 ನಾನು ತೋರಿಸಿದ ಘಟನಾ ಸ್ಥಳಕ್ಕೆ ಪೋಲೀಸರು ಬಂದು ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 8-30 ರಿಂದ 9-00 ಗಂಟೆ ಸಮಯದವರೆಗೂ ನಿಪಿ-2 ರಂತೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿನ ವಿಚಾರ ಗೊತ್ತಿದ್ದರು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾವು ಈಗ ರಾಜಿಯಾಗಿದ್ದೇವೆಂದು ನುಡಿಯುತ್ತಾರೆ. ರಾಜಿಯಾದ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**